# ಯೋ ಯೋ.. ಎಲ್ಲಿದ್ದೀಯ?

'ಚೆನ್ನೈ ಎಕ್ಸ್‌ಪ್ರೆಸ್' ಎಂಬ ಶಾರೂಕ್ ಖಾನ್ ಅಭಿನಯದ ಸಿನಿಮಾ ಕಳೆದ ವರ್ಷ ಸೂಪರ್‌ಹಿಟ್ ಆದದ್ದು ಎಲ್ಲರಿಗೂ ಗೊತ್ತು. ಅದರಲ್ಲೊಂದು ಹಾಡು– ಲುಂಗಿ ಡ್ಯಾನ್ಸ್ ಲುಂಗಿ ಡ್ಯಾನ್ಸ್– ಬಹುತೇಕ ಎಲ್ಲರ ಬಾಯಲ್ಲೂ ನಲಿದಾಡಿತು. ಆ ಹಾಡನ್ನು ಬರೆದು, ಸಂಗೀತ ನೀಡಿ, ಹಾಡಿದಾತ ಯೊ ಯೊ ಹನೀ ಸಿಂಗ್. ಇದಿಷ್ಟೂ ಈತನ ಒರಿಜಿನಲ್ ಹೆಸರಲ್ಲ. ಹೋಶಿಯಾರ್‌ಪುರದಲ್ಲಿ ಹುಟ್ಟಿದ ಈ ಪಂಜಾಬಿಯ ನೈಜ ಹೆಸರು ಹಿರ್ದೇಶ್ ಸಿಂಗ್. ಈತನ ಅಮ್ಮ ಪ್ರೀತಿಯಿಂದ ಹನೀ ಎನ್ನುತ್ತಿದ್ದರಂತೆ. ಇಂಗ್ಲೆಂಡಿನಲ್ಲಿ ಕಲೆಯ ಅಧ್ಯಯನ ಮಾಡುತ್ತಿದ್ದಾಗ, ಯುವರ್ ಓವ್ನ್ ಹನೀ ಸಿಂಗ್ ಎಂಬ ಈತನ ಹೇಳಿಕೆಯನ್ನು ಸರಿಯಾಗಿ ಉಚ್ಚರಿಸಲಾಗದೆ, ಅವರು ಯೊ ಯೊ ಹನೀ ಸಿಂಗ್ ಎನ್ನುತ್ತಿದ್ದರಂತೆ. ಹಾಗಾಗಿ ಈತ ಯೊ ಯೊ ಹನೀ ಸಿಂಗ್ ಎಂದೇ ಪ್ರಸಿದ್ಧ! 'ಚೆನ್ನೈ ಎಕ್ಸ್‌ಪ್ರೆಸ್'ಗೆ ಶಾರೂಕ್ ಕುಣಿತಕ್ಕೆ ಒಂದು ಪಂಜಾಬಿ ಹಾಡು ಬರೆದುಕೊಡೆಂದು ಕೇಳಿದರೆ, ಈತ ಬರೆದದ್ದು ಲುಂಗಿ ಡ್ಯಾನ್ಸ್. ನಿರ್ಮಾಪಕರು ಬೇಡವೆಂದರೂ ಈತ ಹಠ ಹಿಡಿದು ಒಪ್ಪಿಸಿ ಅದನ್ನೇ ಹಾಡಿದ. ಅದು ಸೂಪರ್‌ಹಿಟ್ ಆದದ್ದೇ ಶಾರೂಕ್ ಈತನಿಗೆ ಹಿರಿಯಣ್ಣನಷ್ಟು ಹತ್ತಿರವಾದ.

–ಇಷ್ಟೆಲ್ಲಾ ಫ್ಲ್ಯಾಶ್ ಬ್ಯಾಕ್ ಏಕೆಂದರೆ, ಈಗ ಹನೀ ಸಿಂಗ್ ನಾಪತ್ತೆಯಾಗಿದ್ದಾನೆ. ಕಳೆದ 2–3 ತಿಂಗಳಿಂದ ಈತನನ್ನು ನೋಡಿದವರೇ ಇಲ್ಲ. ಸೆಲ್ ನಂಬರ್ ಕೂಡಾ ಬದಲಾಯಿಸಿದ್ದಾನೆ. ಶಾರೂಕ್ ಖಾನ್‌ನ 'ಹ್ಯಾಪೀ ನ್ಯೂ ಇಯರ್' ಸಿನಿಮಾಕ್ಕೂ ಹಾಡಿದ್ದ ಈತ, ಅದರ ಪ್ರಮೋಶನ್‌ಗೆ ನಡೆದ ಲೈವ್ ಶೋಗಳಲ್ಲೂ ಕಾಣಿಸಲಿಲ್ಲ. ಹನೀ ಸಿಂಗ್ ಎಲ್ಲಿದ್ದಾನೆಂದು ಯಾರನ್ನು ಕೇಳಿದರೂ ಸರಿಯಾದ ಉತ್ತರ ಸಿಗುತ್ತಿಲ್ಲ. ಹಾಗೆಂದು ಈತ ನಾಪತ್ತೆಯಾಗಿದ್ದಾನೆಂದು ಮನೆಯವರು ಪೊಲೀಸರಿಗೆ ದೂರು ಕೂಡಾ ಕೊಟ್ಟಿಲ್ಲ.

'ಶಾರೂಕ್ ಜತೆಗೆ ಜಗಳವಾಗಿ ಕಪಾಳಮೋಕ್ಷ ಮಾಡಿಸಿಕೊಂಡಿದ್ದಾನೆ. ಆ ಬಳಿಕ ಆತನ ಪತ್ತೆಯಿಲ್ಲ' ಎನ್ನುವುದು ಒಂದು ಸುದ್ದಿ. 'ಊರೆಲ್ಲ ಸಾಲ ಮಾಡಿಕೊಂಡಿದ್ದಾನೆ, ಅದಕ್ಕೇ ಯಾರ ಕೈಗೂ ಸಿಗುತ್ತಿಲ್ಲ' ಎನ್ನುವುದು ಇನ್ನೊಂದು ಸುದ್ದಿ. 'ಮಾದಕ ದ್ರವ್ಯಗಳ ದಾಸನಾಗಿದ್ದ. ಈಗ ಚಂಡೀಗಢದಲ್ಲಿ ವ್ಯಸನಮುಕ್ತಿ ಕೇಂದ್ರಕ್ಕೆ ಸೇರಿದ್ದಾನೆ' ಎನ್ನುವುದು ಮೂರನೇ ಸುದ್ದಿ. ಮಾಧ್ಯಮಗಳಲ್ಲಿ ಬರುತ್ತಿರುವ ಈ ಮೂರೂ ಸುದ್ದಿಗಳಿಂದ ಬೇಜಾರಾಗಿರುವ ಈತನ ಪತ್ನಿ ಶಾಲಿನಿ ಸಿಂಗ್, 'ಆತ ತೀವ್ರ ಅನಾರೋಗ್ಯದಲ್ಲಿರುವಾಗ ಹೀಗೆಲ್ಲ ಗಾಳಿಸುದ್ದಿ ಹರಡುವವರಿಗೆ ಏನನ್ನಬೇಕು? ಇವರು ಮನುಷ್ಯರೆ?' ಎಂದು ಕಿಡಿ ಕಾರಿದ್ದಾಳೆ. 'ಏನಮ್ಮ ಹುಷಾರಿಲ್ಲ, ಏನಾಗಿದೆ?' ಎಂದರೆ ಆಕೆ ಹೇಳುವುದು– 'ತುಂಬಾ ಹುಷಾರಿಲ್ಲ, ಡೆಲ್ಲೀಲಿದ್ದಾರೆ. ಬೆಡ್‌ರೆಸ್ಟ್‌ನಲ್ಲಿದ್ದಾರೆ' ಎನ್ನುವುದಷ್ಟೆ!

ಹನೀ ಸಿಂಗ್ ಸ್ವತಃ ಇಷ್ಟಪಟ್ಟು ಟೀವಿಯಲ್ಲಿ ಆರಂಭಿಸಿದ 'ಇಂಡಿಯಾಸ್ ರಾ ಸ್ಟಾರ್' ಕಾರ್ಯಕ್ರಮದಲ್ಲೂ ಕಾಣಿಸಿಕೊಳ್ಳುತ್ತಿಲ್ಲ, ಆತನ ಬದಲಿಗೆ ಗೆಳೆಯ ಹಿಮೇಶ್ ರೇಷಮಿಯಾ ಜಡ್ಜ್ ಸ್ಥಾನವನ್ನು ಒಬ್ಬನೇ ನಿಭಾಯಿಸುತ್ತಿದ್ದಾನೆ.

ಇನ್ನೂ 31ರ ಹರೆಯದ ಹನೀ ಸಿಂಗ್ (ಬರ್ತ್‌ಡೇ 15/3/1983) ಲಂಡನ್ನಿನ ಟ್ರಿನಿಟಿ ಸ್ಕೂಲ್‌ನ ವಿದ್ಯಾರ್ಥಿಯಾಗಿದ್ದಾತ. ಅಲ್ಲಿ ಕಲೆಯನ್ನು ಅಧ್ಯಯನ ಮಾಡಿದರೂ ಆಸಕ್ತಿ ಹೆಚ್ಚಾಗಿ ಇದ್ದದ್ದು ಸಂಗೀತದಲ್ಲಿ. ಪಂಗ್ಲಿಷ್ ಹಾಡುಗಳ ಮೂಲಕ ಸ್ಥಾನ ಗಿಟ್ಟಿಸಲು ಯತ್ನಿಸಿದರೂ ಅಲ್ಲಿ ತನ್ನ ಸಂಗೀತಕ್ಕೆ ಬೇಡಿಕೆ ಇಲ್ಲದಾಗ ಮುಂಬೈಗೆ ಬಂದ. ಮುಂಬೈಯಲ್ಲೂ ಯಾರೂ ಅವಕಾಶ ಕೊಡಲಿಲ್ಲ. 'ಪಂಜಾಬಿ –ಇಂಗ್ಲಿಷ್‌ನ ಮಿಕ್ಸರ್ ಎಲ್ಲ ಇಲ್ಲಿ ನಡೆಯಲ್ಲ ಕಣಯ್ಯ' ಎಂದವರೇ ಹೆಚ್ಚು. ಕೊನೆಗೆ ಸ್ವಂತದ್ದೊಂದು ಹಾಡು ಬರೆದು ತಾನೇ ನಿರ್ಮಿಸಿದ; ಅದು ಸೂಪರ್ ಹಿಟ್ ಆಯಿತು. ಆ ಬಳಿಕ ಎಲ್ಲರೂ ಈತನ ಮನೆ ಮುಂದೆ ಕ್ಯೂ ನಿಲ್ಲತೊಡಗಿದರು. ಪಾರ್ಟಿ ಆಲ್ ದಿ ನೈಟ್, ಆತ ಮಾಜಿ ಸತಾಕ್ಲಿ (ಸಿಂಗಂ ರಿಟರ್ನ್ಸ್), ಲವ್ ಡೋಸ್, ದೇಸೀ ಕಲಾಕಾರ್, ಅಲ್ಫಾಜ್, ಇಂಟರ್‌ನ್ಯಾಷನಲ್ ವಿಲೇಜ್, ನೆವರ್‌ಡನ್ ಬಿಫೋರ್ (ಆಲ್ಬಂಗಳು) ಎಲ್ಲವೂ ಸೂಪರ್ ಹಿಟ್. 'ಮಸ್ತಾನ್' ಚಿತ್ರದ ಒಂದು ಹಾಡಿಗೆ 70 ಲಕ್ಷ ರೂಪಾಯಿ ಸಂಭಾವನೆ ಪಡೆದು ದಾಖಲೆ ನಿರ್ಮಿಸಿದ. ಜನಪ್ರಿಯ, ಬೇಡಿಕೆಯ ಗಾಯಕರಾದ ಸೋನು ನಿಗಮ್ ಮತ್ತು ಮಿಲ್ಕಾ ಪಡೆಯುವುದು ಒಂದು ಹಾಡಿಗೆ 12 ಲಕ್ಷ ರೂಪಾಯಿ ಮಾತ್ರ ಎಂದರೆ ಹನೀ ಸಿಂಗ್‌ನ ಬೇಡಿಕೆ ಎಷ್ಟಿದೆಯೆನ್ನುವುದು ಗೊತ್ತಾಗುತ್ತದೆ.

ಹಾಗೆಂದು ಈತನ ವಿವಾದಗಳಿಗೆ ಕೊರತೆಯಿಲ್ಲ. ಅಶ್ಲೀಲ ಹಾಡುಗಳಿಗಾಗಿ ಈತನ ಮೇಲೆ ಪಂಜಾಬ್ ಹೈಕೋರ್ಟಿನಲ್ಲಿ ಮೊಕದ್ದಮೆ ದಾಖಲಾಗಿದೆ. 2012ರಲ್ಲಿ ದೆಹಲಿ ಅತ್ಯಾಚಾರ ಪ್ರಕರಣ ಸುದ್ದಿಯಲ್ಲಿದ್ದಾಗ ಈತನ ಹಾಡು 'ಮೈ ಅತ್ಯಾಚಾರಿ ಹೂಂ' ಹೊರಬಂತು. ಜನ ಎಷ್ಟು ಸಿಟ್ಟಿಗೆದ್ದರೆಂದರೆ, ಹೊಸ ವರ್ಷದ ಪಾರ್ಟಿಯಲ್ಲಿ ಈತನ ಹಾಡು–ಕುಣಿತ ರದ್ದಾದವು. ನಿಜಕ್ಕೂ ಈತ ಮಾದಕ ವ್ಯಸನ ಬಿಡಿಸುವ ಪುನರ್ವಸತಿ ಕೇಂದ್ರಕ್ಕೆ ಸೇರಿರಬಹುದು ಎನ್ನುವುದು ದಟ್ಟವಾದ ಅನುಮಾನ. 'ಸ್ಟುಡಿಯೋದಲ್ಲಿ ಈತ ಒಂದು ದಿನವೂ ಮಾದಕ ದ್ರವ್ಯ ಸೇವಿಸಿದ್ದು ನಾನು ನೋಡಿಲ್ಲ, ಕರೆಕ್ಟಾಗಿ ಇರುತ್ತಾನೆ. ಆದರೆ ಹೊರಗೆ ಮಾತ್ರ ಸಖತ್ ಕುಡುಕ, ವ್ಯಸನಿ. ಇತ್ತೀಚೆಗೆ ನನಗೂ ಎಲ್ಲೂ ಕಾಣಸಿಕ್ಕಿಲ್ಲ' ಎಂದು ಈತನ ನಿಕಟ ಸ್ನೇಹಿತ, ಗೀತ ರಚನೆಕಾರ ಯೋ ಹೇಳಿದ್ದಾನೆ. 'ಈ ಸಲ ಹೊಸ ವರ್ಷದ ರಾತ್ರಿಯನ್ನು ದೆಹಲಿಯ ಅನಾಥಾಶ್ರಮದಲ್ಲಿ ಮಕ್ಕಳ ಜತೆಗೆ ಆಚರಿಸಿದೆ' ಎಂದು ಜನವರಿ ಮೊದಲ ವಾರದಲ್ಲಿ ಈತ ಟ್ವಿಟರ್ ಖಾತೆಗೆ ಫೋಟೋ ಒಂದನ್ನು ಹಾಕಿದ್ದಾನೆ. ಅದು ಬಿಟ್ಟರೆ ಬೇರೆ ಯಾವ ಸುದ್ದಿಯೂ ಇಲ್ಲ. ಗುಜರಾತಿ, ಪಂಜಾಬಿ ಮತ್ತು ಹಿಂದಿಯಲ್ಲಿ ಗಾಯಕನಾಗಿ ಅಪಾರ ಬೇಡಿಕೆಯ ಈತನ ಹಾಡುಗಳು ಆನ್‌ಲೈನ್‌ನಲ್ಲಿ 4–5 ಕೋಟಿ ಹಿಟ್‌ಗಳನ್ನು ಪಡೆಯುತ್ತಿದೆ. ಈತನ ಅಭಿಮಾನಿಗಳು ಸದ್ಯಕ್ಕೆ ಕೇಳುತ್ತಿರುವ ಪ್ರಶ್ನೆ ಒಂದೇ– ಯೋ.. ನೀನೆಲ್ಲಿದ್ದೀಯಾ? ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65